**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ ಇವರ ದಿನಾಂಕ: 18.07.2024ರ ಶೂನ್ಯ ವೇಳೆಯ ಪ್ರಶ್ನೆಗೆ ಮಾನ್ಯ ಕೃಷಿ ಸಚಿವರ ಉತ್ತರ.**

ಬಾಗಲಕೋಟೆ ಜಿಲ್ಲೆಯಲ್ಲಿ ರಾಜ್ಯದ ಏಕಮಾತ್ರ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ದುರ್ಬಲಗೊಳಿಸುವ ಯತ್ನಗಳು ಶುರುವಾಗಿದೆ ಎಂಬ ವರದಿಯನ್ನು ಗಮನಿಸಿದರೆ ಜಿಲ್ಲೆಯ ತೋಟಗಾರಿಕೆ ವಿಶ್ವವಿದ್ಯಾಲಯದ ಬಗ್ಗೆ ರಾಜ್ಯ ಸರ್ಕಾರ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ ಎಂದು ಅನಿಸುತ್ತಿದೆ.

2009 ರಲ್ಲಿ ಆರಂಭಗೊಂಡ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯವು ತೋಟಗಾರಿಕೆಗೆ ಸಂಬಂಧಿಸಿದಂತೆ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಜತೆಗೆ ಸಂಶೋಧನೆಗೆ ಆದ್ಯತೆ ನೀಡುತ್ತಿದೆ. ತೋಟಗಾರಿಕೆ ಕ್ಷೇತ್ರವು ದೇಶದ ಸಮಗ್ರ ಅಭಿವೃದ್ಧಿಗೆ ಶೇ 30 ಕೊಡುಗೆ ನೀಡುತ್ತಿರುವುದಲ್ಲದೇ ಎಲ್ಲ ಸಂದರ್ಭಗಳಲ್ಲೂ ತೋಟಗಾರಿಕಾ ಬೆಳೆಗಳು ರೈತರಿಗೆ ನೆರವಾಗುವ ಉದ್ದೇಶದಿಂದ ಪ್ರತ್ಯೇಕ ವಿ.ವಿ ಸ್ಥಾಪಿಸಲಾಗಿತ್ತು. ದಕ್ಷಿಣ ಕರ್ನಾಟಕದ ಕೋಲಾರ ಸೇರಿ ಒಂದೆರಡು ಜಿಲ್ಲೆಗಳಲ್ಲಿ ತೋಟಗಾರಿಕೆಗೆ ಅವಕಾಶಗಳಿದ್ದರೆ, ಉತ್ತರ ಕರ್ನಾಟಕದ ಭಾಗದಲ್ಲಿ ಬಾಗಲಕೋಟೆ ವಿಜಯಪುರ ಭಾಗಶಃ ಬೆಳಗಾವಿ ಜಿಲ್ಲೆಗಳು ತೋಟಗಾರಿಕೆ ಬೆಳೆಗಳಿಗೆ ವಿಪುಲ ಅವಕಾಶ ನೀಡಿದವುಗಳಾಗಿವೆ. ಇದನ್ನು ಗಮನಿಸಿದ ಅಂದಿನ ಸರ್ಕಾರ ಕೇಂದ್ರ ಭಾಗದಲ್ಲಿರುವ ಬಾಗಲಕೋಟೆಗೆ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆ ಮಾಡಿದ್ದನ್ನು ಮರೆಯಕೂಡದು.

ಮುಳುಗಡೆನಗರಿ ಪಟ್ಟ ಹೊತ್ತಿರುವ ಬಾಗಲಕೋಟೆಗೆ ವಿವಿ ಘೋಷಣೆಗೊಂಡಾಗ ಈ ಭಾಗಕ್ಕೆ ಸರ್ಕಾರದ ಉತ್ತಮ ಕೊಡುಗೆ ಎಂದು ಬಣ್ಣಿಸಲಾಗಿತ್ತು. ಆದರೆ ಈ ಸಮಗ್ರ ವಿಶ್ವವಿದ್ಯಾಲಯಕ್ಕೆ ಒಳಪಡುತ್ತಿರುವುದರಿಂದ ಬಾಗಲಕೋಟೆ ತೋಟಗಾರಿಕೆ ವಿ.ವಿ.ಯ ಪ್ರತಿಷ್ಠೆ ಕುಗ್ಗಲಿದ್ದು, ವಿ.ವಿ. ದುರ್ಬಲಗೊಳ್ಳುತ್ತಿದೆ ಎಂಬ ಆತಂಕ ಜಿಲ್ಲೆಯ ಜನರಲ್ಲಿ ಶುರುವಾಗಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ:ರಾಜೇಂದ್ರಪ್ರಸಾದ ನೇತೃತ್ವದ ಸಮಿತಿಯನ್ನು ಮಂಡ್ಯದಲ್ಲಿ ಆರಂಭವಾಗುವ ಕೃಷಿ ವಿವಿಗೆ ಶಿಫಾರಸು ಮಾಡುವುದಕಾಗಿ ರಚಿಸಲಾಗಿತ್ತು. ಈ ಸಮಿತಿ ಇತ್ತೀಚೆಗೆ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ವರದಿಯನ್ನು ಸಲ್ಲಿಸಿದ್ದು, ಈ ವರದಿಯೇ ಹಲವು ಆಕ್ಷೇಪಗಳಿಗೆ ಕಾರಣವಾಗಿದೆ. ಸಮಗ್ರ ವಿ.ವಿ ಶಿಫಾರಸು ಮಾಡುತ್ತಿರುವ ಸಮಿತಿಯಲ್ಲಿ ತೋಟಗಾರಿಕೆ ಇಲಾಖೆ ವಿ.ವಿ ತಜ್ಞರ ಇಲ್ಲದಿರುವುದರಿಂದ ಇದು ಏಕಪಕ್ಷೀಯ ವರದಿ ಆಗಬಾರದು.

ಜಿಲ್ಲೆಯ ತೋಟಗಾರಿಕೆ ವಿ.ವಿ. ಗೆ ಅನುದಾನದ ವಿಚಾರದಲ್ಲೂ ರಾಜ್ಯ ಸರ್ಕಾರ ನಿರ್ಲಕ್ಷ ತೋರುತ್ತಿರುವುದು ದುರ್ದೈವದ ಸಂಗತಿ. ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ನಿರೀಕ್ಷಿತ ಅನುದಾನವೂ ಲಭ್ಯವಾಗುತ್ತಿಲ್ಲ. ಕಳೆದ ಬಾರಿ 197 ಕೋಟಿ ರೂ.ಗಳ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿ ಸರ್ಕಾರದಿಂದ 102 ಕೋಟಿ ರೂ.ಗಳ ಅನುದಾನ ಲಭಿಸಿತ್ತು. ಎಲ್ಲ ಅಳೆದು ತೂಗಿದರೂ 38.35 ಕೋಟಿ ರೂ.ಗಳ ಅನುದಾನ ಕೊರತೆಯನ್ನು ವಾರ್ಷಿಕವಾಗಿ ವಿವಿ ಎದುರಿಸುತ್ತಲೇ ಬಂದಿದೆ ಎಂಬ ವರದಿಯನ್ನು ಸದನದ ಗಮನಕ್ಕೆ ತರುತ್ತಿದ್ದೇನೆ ವಿವಿ ವ್ಯಾಪ್ತಿಯಲ್ಲಿ 9 ಕಾಲೇಜು, 12 ಸಂಶೋದನಾ ಕೇಂದ್ರ ಹಾಗೂ 12 ವಿಸ್ತರಣಾ ಕೇಂದ್ರಗಳಿವೆ.

ಬಾಗಲಕೋಟೆ ಜಿಲ್ಲೆಯ ತೋಟಗಾರಿಕೆ ವಿಶ್ವ ವಿದ್ಯಾಲಯದ ಈ ಶಿಫಾರಸ್ಸುಗಳ ವರದಿಗಳನ್ನು ಸುದೀರ್ಘವಾಗಿ ಮತ್ತೊಮ್ಮೆ ಮಾರ್ಪಡಿಸಿ ಪುನರ್ ಪರಿಶೀಲಿಸಬೇಕು ಎಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

***

**ಉತ್ತರ:**

2024-25ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಭಾಷಣ ಕಂಡಿಕೆ-42 ರಲ್ಲಿ **"ಮಂಡ್ಯ ಜಿಲ್ಲೆಯ ವಿ.ಸಿ. ಫಾರಂ ನಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಪರಿಶೀಲಿಸಲು ತಜ್ಞರ ಸಮಿತಿ ರಚಿಸಲಾಗುವುದು"** ಎಂದು ಘೋಷಿಸಿರುತ್ತಾರೆ.

ಅದರಂತೆ, ಡಾ. ರಾಜೇಂದ್ರ ಪ್ರಸಾದ್, ವಿಶ್ರಾಂತ ಕುಲಪತಿಯವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ದಿನಾಂಕ: 15-03-2024ರಂದು ರಚಿಸಿ, ಸದರಿ ಸಮಿತಿಯು ತುರ್ತಾಗಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿರುತ್ತದೆ.

ಸರ್ಕಾರವು ಸಮಗ್ರ ಕೃಷಿ ವಿಶ್ವವಿದ್ಯಾಲಯದ ಮಹತ್ವವನ್ನು ಗಮನಿಸಿ, 2013ರಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಈ ವಿಶ್ವವಿದ್ಯಾಲಯವು ಯಶಸ್ವಿಯಾಗಿ ಕೃಷಿ, ತೋಟಗಾರಿಕೆ ಹಾಗೂ ಅರಣ್ಯ ಮಹಾವಿದ್ಯಾಲಯವನ್ನು ಒಳಗೊಂಡಿದ್ದು, ಸಮಗ್ರ ಕೃಷಿ ವಿಶ್ವವಿದ್ಯಾಲಯವಾಗಿ ಕಾರ್ಯನಿರ್ವಹಿಸುತ್ತಿದೆ.

ಕೃಷಿ ಅನುಸಂದಾನ ಪರಿಷತ್ತು, 2016ರಲ್ಲಿ ರಾಷ್ಟ್ರದಲ್ಲಿ ನೂತನ ಕೃಷಿ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಅನುಸರಿಸಬೇಕಾದ ಮಾನದಂಡಗಳನ್ನು ಪ್ರಕಟಿಸಿರುತ್ತಾರೆ.

ಇದಕ್ಕೆ ಪೂರಕವಾಗಿ, ಸರ್ಕಾರಿ ಆದೇಶ ಸಂಖ್ಯೆ: ಕೃಇ 02 ಕೃವಿವಿ 2019, ದಿನಾಂಕ: 02.05.2019ರಲ್ಲಿ ಡಾ:ಎಂ.ಎನ್.ಶೀಲವಂತರ್, ವಿಶ್ರಾಂತ ಕುಲಪತಿ, ರವರ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿಯು "If the Government thinks of establishing any new Farm Universities in future, the committee recommends for integrated Universities than the subject wise specialized Universities" ಎಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿ, 2020 ಶಿಫಾರಸ್ಸಿನಂತೆ ಸರ್ಕಾರವು ಯಾವುದೇ ನೂತನ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಾಗ ಸಮಗ್ರ ವಿಶ್ವವಿದ್ಯಾಲಯವನ್ನಾಗಿ ಪ್ರಾರಂಭಿಸಲು ಸೂಚಿಸಿದೆ.

ಮುಂದುವರೆದು, Model Act for Higher Agricultural Institutions in India (Revised- 2023) of ICAR, New Delhi ಅಧಿನಿಯಮದಲ್ಲಿ ಕೃಷಿ

ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವ ಮುನ್ನ ಅನುಸರಿಸುವ ಎಲ್ಲಾ ಕ್ರಮಗಳ ಬಗ್ಗೆ ಪ್ರಕಟಿಸಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಡಾ. ರಾಜೇಂದ್ರ ಪ್ರಸಾದ್, ವಿಶ್ರಾಂತ ಕುಲಪತಿಯವರ ಅಧ್ಯಕ್ಷತೆಯಲ್ಲಿ ರಚಿಸಿದ ತಜ್ಞರ ಸಮಿತಿಯು ದಿನಾಂಕ: 04.07.2024ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ವರದಿಯು ಸರ್ಕಾರದ ಮಟ್ಟದಲ್ಲಿ ಇನ್ನೂ ಪರಿಶೀಲನಾ ಹಂತದಲ್ಲಿರುತ್ತದೆ.

ಸಂಖ್ಯೆ: AGRI/45/AUM/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು